**ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ**

# ಕನ್ನಡ ಬಳಗ

**ಸ್ಥಾಪನೆ 2015**

## <u>ಕನ್ನಡ ಬಳಗ ನಡೆದು ಬಂದ ದಾರಿ</u>

ಕನ್ನಡದ ನಾಡು, ನುಡಿಗಾಗಿ ತನ್ನ ಅಳಿಲು ಸೇವೆ ಸಲ್ಲಿಸಲು 2015ರಲ್ಲಿ ನಮ್ಮ ಹೆಮ್ಮೆಯ ಕನ್ನಡ ಬಳಗ ಸ್ಥಾಪನೆಯಾಯಿತು.

ನಮ್ಮ ಕನ್ನಡದ ಬಳಗದ ಗೌರವ ಅಧ್ಯಕ್ಷರಾಗಿ ಸಂಸ್ಥೆಯ ನಿರ್ದೇಶಕರಾದ ಡಾ. ಪಿ. ಎಸ್. ಭೂಸರಡ್ಡಿ ಅವರು ಬೆನ್ನೆಲುಬಾಗಿ ನಿಂತು ನಿರಂತರ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡುತ್ತಿದ್ದಾರೆ.

ಕನ್ನಡ ಬಳಗದ ಅಧ್ಯಕ್ಷರಾಗಿ ಡಾ. ಶಂಭು ಪುರದ ಅವರು 2018ರಲ್ಲಿ ನೇಮಕಗೊಂಡರು, ಅವರ ಮುಂದಾಳತ್ವ ಹಾಗೂ ಮಾನ್ಯ ನಿರ್ದೇಶಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ಸಂಘದ ಜೊತೆಗೂಡಿ ಹಲವಾರು ಕನ್ನಡ ಪರ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ.

## ಕಾರ್ಯಕ್ರಮಗಳ ವಿವರ

- ಪ್ರತಿ ವರ್ಷ ನವೆಂಬರ್ 1 ರಂದು ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವವನ್ನು ಆಯೋಜಿಸಲಾಗುತ್ತದೆ.

- ಕನ್ನಡ ಬಳಗದ ಅಧ್ಯಕ್ಷರಾದ ಡಾ. ಶಂಭು ಅವರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂ.ಬಿ.ಬಿ.ಎಸ್. ಅಧ್ಯಯನ ಮಾಡುತ್ತಿರುವ ಕನ್ನಡೇತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ “ಕನ್ನಡ ಕಲಿ” ಪುಸ್ತಕವನ್ನು 2019ರಲ್ಲಿ ಲೋಕಾರ್ಪಣೆ ಮಾಡಲಾಯಿತು. ಈ ಪುಸ್ತಕದ ಮೂಲಕ ವಿದ್ಯಾರ್ಥಿಗಳು ರೋಗಿಯ ಜೊತೆಗೆ ಸಂಭಾಷಣೆಯನ್ನು ಸರಳವಾಗಿ ಕಲಿಯಬಹುದಾಗಿದೆ.

- 2019ರಲ್ಲಿ ಕನ್ನಡ ಬಳಗದ ವತಿಯಿಂದ ಹಾಸ್ಯ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು, ಹಾಸ್ಯ ಚಕ್ರವರ್ತಿ, ಅಭಿನವ ಬೀಚಿ ಗಂಗಾವತಿ ಪ್ರಾಣೇಶ, ನರಸಿಂಹ ಜೋಷಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

- ಪ್ರತಿವರ್ಷ ಕಾಲೇಜಿನ ವಿದ್ಯಾರ್ಥಿಗಳಿಗೆ ಹಲವಾರು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

- ಕನ್ನಡ ಬಳಗದ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಆನ್ ಲೈನ್ ಮೂಲಕ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

- 2020ರ ನವೆಂಬರ್ 1 ರಂದು ಕನ್ನಡ ಬಳಗದ ಲಾಂಛನವನ್ನು ಮಾನ್ಯ ನಿರ್ದೇಶಕರಾದ ಡಾ. ಪಿ. ಎಸ್. ಭೂಸರಡ್ಡಿ ಅವರು ಬಿಡುಗಡೆಗೊಳಿಸಿದರು.

- 2020ರ ನವೆಂಬರ್ 1 ರಂದು ಕನ್ನಡ ಬಳಗದ ಸಾಮಾಜಿಕ ಜಾಳತಾಣಗಳಾದ ಫೇಸಬುಕ್, ಟ್ವಿಟರ್ ಹಾಗೂ ಇನ್ಸ್ಟಗ್ರಾಮ್ ಖಾತೆಗಳನ್ನು ಮಾನ್ಯ ನಿರ್ದೇಶಕರಾದ ಡಾ. ಪಿ. ಎಸ್. ಭೂಸರಡ್ಡಿ ಅವರು ಬಿಡುಗಡೆಗೊಳಿಸಿದರು.

- 2021ರಲ್ಲಿ ಪ್ರಥಮ ಬಾರಿಗೆ ಗದಗ ಜಿಲ್ಲಾ ಅಂತರ ಕಾಲೇಜು “ಮಾತಾಡ್ ಮಾತಾಡ್ ಕನ್ನಡ” ಅಡಿಯಲ್ಲಿ “ಆಶುಭಾಷಣ” ಸ್ಪರ್ಧೆ ಏರ್ಪಡಿಸಲಾಗಿತ್ತು . ಸುಮಾರು 21 ಕಾಲೇಜಿನಿಂದ ವಿದ್ಯಾರ್ಥಿಗಳು ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಡಾ. ಜಿ. ಬಿ. ಪಾಟೀಲ, ಹಾಗೂ ಪ್ರೊ. ಚಂದ್ರಶೇಖರ ವಸ್ತ್ರದ ಅವರು ಆಗಮಿಸಿದ್ದರು.

- 2021ರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಾತಾಡ್ ಮಾತಾಡ್ ಕನ್ನಡ ಅಡಿಯಲ್ಲಿ ಲಕ್ಷ ಕಂಠಗಳ ಗೀತಗಾಯನ ಸಮಾರಂಭವನ್ನು 29-10-2021ರಂದು ಬೆಳಿಗ್ಗೆ 11 ಗಂಟೆಗೆ

ರಾಜ್ಯ ಹಾಗೂ ದೇಶಾದ್ಯಂತ ಏಕಕಾಲದಲ್ಲಿ ಆಯೋಜಿಸಲಾಗಿತ್ತು. ಕುವೆಂಪು ಅವರ "ಬಾರಿಸು ಕನ್ನಡ ಡಿಂಡಿಮವ", ಡಾ. ಕೆ. ಎಸ್. ನಿಸಾರ್ ಅಹಮದ್ ರವರ "ಜೋಗದ ಸಿರಿ ಬೆಳಕಿನಲ್ಲಿ", ಹಂಸಲೇಖ ಅವರ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಗೀತೆಗಳನ್ನು ಹಾಡಲಾಯಿತು. ಈ ವಿಶ್ವದಾಖಲೆಯಲ್ಲಿ ಭಾಗವಹಿಸಿದ ಹಮ್ಮೆ ಎಲ್ಲ ಕನ್ನಡಾಭಿಮಾನಿಗಳದು, ಇದು ನಮ್ಮ ಕನ್ನಡ ಬಳಗದ ಮತ್ತೊಂದು ಸಾಧನೆ

- 2021ರ ನವೆಂಬರ್ 1 ರಂದು ಮತ್ತೊಂದು ಮೈಲುಗಲ್ಲನ್ನು ನಮ್ಮ ಹೆಮ್ಮೆಯ ಕನ್ನಡ ಬಳಗ ಮಾಡಿದೆ. ಗದಗ ವೈದ್ಯಕೀಯ ಸಂಸ್ಥೆಯ ಅಧಿಕೃತ ವೆಬ್ ಸೈಟ್ ನ್ನು ಲೋಕಾರ್ಪಣೆ ಮಾಡಲಾಯಿತು. ಮಾನ್ಯ ನಿರ್ದೇಶಕರಾದ ಡಾ. ಪಿ. ಎಸ್. ಭೂಸರಡ್ಡಿ ಅವರು ಲೋಕಾರ್ಪಣೆ ಮಾಡಿದರು.

- 2021ರ ನವೆಂಬರ್ 1ರಂದು ಬಹುದಿನಗಳ ಕನಸಾದ ಕನ್ನಡ ಬಳಗದ ಕಾರ್ಯಾಲಯವನ್ನು ಸಂಸ್ಥೆಯ ಗ್ರಂಥಾಲಯದ ಕಟ್ಟಡದಲ್ಲಿ ಮಾನ್ಯ ನಿರ್ದೇಶಕರಾದ ಡಾ. ಪಿ. ಎಸ್. ಭೂಸರಡ್ಡಿ ಅವರು ಬಿಡುಗಡೆಗೊಳಿಸಿದರು. ತಾಯಿ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸುವುದರ ಮೂಲಕ ಉದ್ಘಾಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಚಾರ್ಯರಾದ ಡಾ. ರಾಜು ಜಿ. ಎಂ ಅವರು, ವೈದ್ಯಕೀಯ ಅಧೀಕ್ಷಕರಾದ ಡಾ. ರಾಜಶೇಖರ ಮ್ಯಾಗೇರಿ ಅವರು, ಕನ್ನಡ ಬಳಗದ ಅಧ್ಯಕ್ಷರಾದ ಡಾ. ಶಂಭು ಪುರದ ಅವರು ಉಪಸ್ಥಿತರಿದ್ದರು.